**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 2529/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಶಿವಕುಮಾರ್ ಹೆಚ್ | **ಚಾ.ಸಾ.-3** |
| **ತಂದೆಯ ಹೆಸರು** | - | ಕರೀಗೌಡ ಹೆಚ್ ಕೆ | **ಫ್ರಾ.ಸಾ.-1** |
| **ವಯಸ್ಸು** | - | 55 ವರ್ಷ | |
| **ಉದ್ಯೋಗ** | - | ವ್ಯವಸಾಯ | |
| **ವಾಸಸ್ಥಳಃ** | - | ಕರಡಕೆರೆ | |

ದಿನಾಂಕಃ 05.02.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಚಾ.ಸಾ. 1 ನನ್ನ ಅತ್ತಿಗೆ. ಚಾ.ಸಾ.2 ನನ್ನ ತಮ್ಮ. ಚಾ,ಸಾ. 1 ರವರ ಮನೆಯಲ್ಲಿ ಮಧ್ಯಾರಾತ್ರಿ ಯಾರೋ ಬಾಗಿಲು ಹೊಡೆದು ಕಳ್ಳತನವನ್ನು ಮಾಡಿಕೊಂಡು ಹೋಗಿದ್ದಾರೆಂದು, ಚಾ.ಸಾ. 2 ರವರು ನನಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ನಾನು ಊರಿಗೆ ಬಂದು ನೋಡಿದ್ದು, ಚಾ.ಸಾ. 1 ರವರು ಅಳುತ್ತಾ ಕುಳಿತಿದ್ದರು, ಆಗ ನಾನು ಅವರಿಗೆ ಸಮಾಧಾನ ಮಾಡಿರುತ್ತೇನೆ, ಅದಕ್ಕೆ ಸಂಬಂಧಪಟ್ಟಂತೆ, ನಾನು ಪೋಲೀಸರ ಮುಂದೆ ಹೇಳಿಕೆಯನ್ನೂ ಸಹ ನೀಡಿರುತ್ತೇನೆ ಹಾಗೂ ಚಾ.ಸಾ. 1 ರವರ ಮನೆಯಿಂದ ಸುಮಾರು 100 ಗ್ರಾಂ ನಷ್ಟು ಚಿನ್ನ, ಅಂದರೆ ಮಾಂಗಲ್ಯ ಚೈನು ಮತ್ತು ಎರಡು ಚಿನ್ನದ ಬಳೆಗಳು ಹಾಗೂ 1 ಲಕ್ಷ ನಗದು ಹಣವನ್ನು ಕಳ್ಳರು ಬಂದು ಕಿತ್ತುಕೊಂಡು ಹೋಗಿರುತ್ತಾರೆಂದು ನನ್ನ ಅತ್ತಿಗೆ ಹೇಳಿರುತ್ತಾರೆ. ಅದರಂತೆ ನಾನು ಹೇಳಿಕೆಯನ್ನೂ ಸಹ ಹೇಳಿರುತ್ತೇನೆ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ**

ನಾನು ಚಾ.ಸಾ. 1 ರವರ ಮನೆಗೆ ಹೋದಾಗ ಮಧ್ಯರಾತ್ರಿ ಎಷ್ಟು ಸಮಯ ಆಗಿತ್ತು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಚಾ.ಸಾ. 1 ನನ್ನ ಅತ್ತಿಗೆ ಆಗಬೇಕೆಂದರೆ ಸರಿ. ಚಾ.ಸಾ. 2 ರವರೂ ಸಹ ನನಗೆ ಸಂಬಧಿಕರಾಗಿದ್ದಾರೆಂದರೆ ಸರಿ. ಚಿನ್ನದ ಮಾಂಗಲ್ಯದ ಸರ, ಬಳೆ ಮತ್ತು ನಗದು ಹಣವನ್ನು ತೆಗೆದುಕೊಂಡು ಹೋಗಿದ್ದರೆಂದು ಚಾ.ಸಾ. 1 ರವರು ನನಗೆ

ಹೇಳಿದ್ದರಿಂದ ನನಗೆ ಗೊತ್ತಾಗಿರುತ್ತದೆ.  ನಾನು ನನ್ನ ಹೇಳಿಕೆಯಲ್ಲಿ ಚಾ.ಸಾ. 1 ರವರ ಮನೆಗೆ ನಾಲ್ಕು ಜನ ಬಂದಿದ್ದರು, ನನ್ನ ಅತ್ತಿಗೆ ನನಗೆ ಹೇಳಿರುವುದಿಲ್ಲ.  1 ಲಕ್ಷದ 50 ಸಾವಿರ ಹಣವನ್ನು ಕಳ್ಳರು ತೆಗೆದುಕೊಂಡು ಹೋಗಿರುತ್ತಾರೆಂದು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ.  ಚಾ.ಸಾ. 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನಂದರೆ ಸರಿಯಲ್ಲ.  ಚಾ.ಸಾ. 1 ರವರ ಹೇಳಿಕೆಯ ಆಧಾರದ ಮೇಲೆ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

1 ನೇ ಅಪರ ಸಿವಿಲ್  ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.